## ಸ್ಕೇರಿ ಪ್ರ್ಯಾಂಕ್



ಸ್ನೇಹಿತರಿಗೆ ಭಯ ಹುಟ್ಟಿಸಿ ತಮಾಷೆ ನೋಡಬೇಕಾ? ನಿಮ್ಮ ಪ್ರಾಣ ಸ್ನೇಹಿತ ಭೀತಿಯಿಂದ ಎದ್ದು ಬಿದ್ದು ಓಡುವುದನ್ನು ನೋಡಿ ಹೊಟ್ಟೆ ಹುಣ್ಣಾಗುವಷ್ಟು ನಗಬೇಕಾ? ಹಾಗಾದರೆ ಸ್ಕೇರಿ ಪ್ರ್ಯಾಂಕ್ ಅಪ್ಲಿಕೇಶನ್ ನಿಮಗೊಂದಿಷ್ಟು ತಮಾಷೆ ನೀಡಬಲ್ಲದು. ಮೊದಮೊದಲು ಇದು ಒಂದು ಗೇಮ್ ಅಷ್ಟೆ ಎನಿಸಬಹುದು. ಆದರೆ ಬೇರೆಯವರಿಗೆ ಅಂದರೆ ಮಿತ್ರರಿಗೆ ಈ ಅಪ್ಲಿಕೇಶನ್ ದಾಟಿಸಿ ಇದೊಂದು ಗೇಮ್ ಅಷ್ಟೆ ಎಂದು ಹೇಳಿ.

ಮೊಬೈಲ್‌ನಲ್ಲಿ ಈ ಅಪ್ಲಿಕೇಶನ್ ಅಳವಡಿಸಿ ವಾಲ್ಯೂಮ್ ಹೆಚ್ಚಿಸಿ. ಭೂತವೊಂದು ಕೆಟ್ಟದಾಗಿ ಚೀರುತ್ತ ಮೊಬೈಲ್ ಪರದೆಯಿಂದ ಆಚೆಗೆ ಜಿಗಿದಂತೆ ಕಾಣುತ್ತದೆ. ಜೊತೆಗೆ ಭಯ ಹುಟ್ಟಿಸುವ ಹಿನ್ನೆಲೆ. ಆದರೆ ಇದು ಉಚಿತವೇನಲ್ಲ.

## ಫೋನ್ ಚುರುಕಿಗೆ ಸೂಪರ್ ಬೂಸ್ಟರ್

ಮೊಬೈಲ್ ಫೋನ್ ತೀರಾ ನಿಧಾನವಾಗಿ ಕಿರಿ ಕಿರಿ ನೀಡುತ್ತಿದ್ದರೆ ಸೂಪರ್ ಬೂಸ್ಟರ್ ಮೆಮೊರಿ ಆಪ್ಟಿಮೈಜರ್ ಅಳವಡಿಸಿಕೊಳ್ಳಿ. ಅದು ರಿಬೂಟ್ ಅನ್ನು ಚುರುಕುಗೊಳಿಸಿ ಎಲ್ಲಾ ಕೋರ್ ಮತ್ತು ಯೂಸರ್ ಟಾಸ್ಕ್‌ಗಳನ್ನು ಕ್ಲೋಸ್/ ರಿಸ್ಟಾರ್ಟ್ ಮಾಡುತ್ತದೆ. ಈ ಮೂಲಕ ಮೆಮೊರಿಯಲ್ಲಿರುವ ಎಲ್ಲಾ ಬೇಡದ ವಿಷಯಗಳನ್ನು ಸ್ವಚ್ಛಗೊಳಿಸಿ ಹೊಸದಾಗಿ ಅಣಿಗೊಳಿಸುತ್ತದೆ.

ಒಂದೆ ಒಂದು ಕ್ಲಿಕ್‌ನಲ್ಲಿ ಕ್ಲೋಸಿಂಗ್/ ರಿಸ್ಟಾರ್ಟಿಂಗ್ ಮಾಡುತ್ತದೆ. ಜೊತೆಗೆ ಹಿನ್ನೆಲೆಯಲ್ಲಿ ಚಾಲ್ತಿಯಲ್ಲಿರುವ ಅಪ್ಲಿಕೇಶನ್ ಅನ್ನು ಬಂದ್ ಮಾಡಿ ಬ್ಯಾಟರಿ ಉಳಿತಾಯ ಮಾಡುತ್ತದೆ. ಮೆಮೊರಿಯಲ್ಲಿ ಸಾಕಷ್ಟು ಜಾಗವನ್ನು ಅನುವು ಮಾಡಿಕೊಟ್ಟು ಆ್ಯಂಡ್ರಾಯ್ಡ್ ವೇಗವಾಗಿ ಕೆಲಸ ಮಾಡುವಂತೆ ಸಹಕರಿಸುತ್ತದೆ. ಇದಲ್ಲದೇ ಸಿಪಿಯು/ ಮೆಮೊರಿ ಮತ್ತು ಮೊಬೈಲ್ ಮಾಹಿತಿ ಒದಗಿಸುತ್ತದೆ.

## ಡಬ್ಲ್ಯುಪಿ ಬೆಂಚ್




ಇದು ವಿಂಡೋಸ್ ಫೋನ್ 7 ಇರುವ ಮೊಬೈಲ್‌ಗಳಿಗೆ ಬಹಳಷ್ಟು ಕುತೂಹಲಕಾರಿ ಅಪ್ಲಿಕೇಶನ್. ಇದು ಸಿಪಿಯು, ಜಿಪಿಯು, ಮೆಮೊರಿ, ಸಂಗ್ರಹ, ಬ್ಯಾಟರಿ ಮೊದಲಾದವುಗಳನ್ನು ಪರಿಶೀಲಿಸಿ ಸೂಕ್ತ ಸ್ಥಿತಿಯಲ್ಲಿವೆಯೇ ಎಂಬುದನ್ನು ಖಚಿತಪಡಿಸುತ್ತದೆ.

ಸಿಪಿಯು ಸಿಂಗಲ್‌ಥ್ರೆಡೆಡ್ ಕಾರ್ಯವೈಖರಿ, ಮೆಮೊರಿ ಓದುವ/ ಬರೆಯುವ ವೇಗ, ಸಂಗ್ರಹದಲ್ಲಿರುವುದನ್ನು ಓದುವ/ ಬರೆಯುವ ವೇಗ, ಜಿಪಿಯು ಕಾರ್ಯವೈಖರಿ, ಪರದೆಯ ಬಣ್ಣ ಈ ಎಲ್ಲವನ್ನೂ ಪರೀಕ್ಷಿಸಬಹುದು. ಜೊತೆಗೆ ಸ್ಮಾರ್ಟ್‌ಫೋನ್ ಬ್ಯಾಟರಿ ಕೂಡಾ ತಪಾಸಣೆಗೆ ಒಳಗಾಗುತ್ತದೆ.




## ಫೋಲ್ಡರ್‌ಗೂ ಬೀಗ

ಮಹತ್ವವಾದ ಫೈಲ್‌ಗಳನ್ನು ಇತರರ ಕೈಗೆ ಸಿಗದಂತೆ ಲಾಕ್ ಮಾಡಬೇಕಾ? ನಿಮ್ಮ ನೆರವಿಗಿದೆ ಫೋಲ್ಡರ್‌ಲಾಕ್. ಇವುಗಳನ್ನು ಆನ್‌ಲೈನ್ ಸ್ಟೋರೇಜ್‌ನಲ್ಲಿ ಇಟ್ಟುಕೊಳ್ಳಬಹುದು. ಜೊತೆಗೆ ಫೈಲ್‌ಗಳನ್ನು, ಫೋಲ್ಡರ್ ಹಾಗೂ ಡ್ರೈವ್‌ಗಳನ್ನು ಲಾಕ್ ಮಾಡಬಹುದು.

ವ್ಯಾಲೆಟ್‌ನಲ್ಲಿ ವೈಯಕ್ತಿಕ ಮಾಹಿತಿಯನ್ನು ಕಾದಿಡಬಹುದು. ಜೊತೆಗೆ ವಿಂಡೋಸ್ ಹಿಸ್ಟರಿಯಲ್ಲಿ ಗುರುತು ಮೂಡಿದ ಫೈಲ್ ಮಾಹಿತಿಯನ್ನು ಅಳಿಸಿ ಹಾಕಬಹುದು.

## ಆ್ಯಪ್ ಲಾಕ್

ನಿಮ್ಮ ಬ್ಲ್ಯಾಕ್‌ಬೆರಿಯಲ್ಲಿರುವ ಅಪ್ಲಿಕೇಶನ್‌ಗಳನ್ನು ಇತರರು ಕದಿಯುತ್ತಾರೆ ಎಂಬ ಭಯ ನಿಮ್ಮಲ್ಲಿದೆಯಾ? ಆ್ಯಪ್ ಲಾಕ್ ಅಪ್ಲಿಕೇಶನ್ ಇಡಿ ಮೊಬೈಲ್ ಅನ್ನೇ ಲಾಕ್ ಮಾಡುವಂತಹ ಸಾಮರ್ಥ್ಯ ಹೊಂದಿದೆ. ಅಂದರೆ ಪ್ರತಿ ಬಾರಿ ಮೊಬೈಲ್ ಬಳಸುವಾಗ ನೀವು ಲಾಕ್ ಮತ್ತು ಅನ್ ಲಾಕ್ ಮಾಡಬೇಕು. ಜೊತೆಗೆ ನಿಮಗೆ ಬೇಕಾದ ಅಪ್ಲಿಕೇಶನ್‌ಗಳನ್ನಷ್ಟೇ ಆಯ್ಕೆ ಮಾಡಿ ಪಾಸ್‌ವರ್ಡ್ ಕೊಟ್ಟು ಭದ್ರ ಮಾಡಬಹುದು.

ನಿಮ್ಮ ಖಾಸಗಿ ಇ–ಮೇಲ್‌ಗಳು, ಚಿತ್ರಗಳು, ವಿಡಿಯೊ ಹಾಗೂ ಇತರ ಫೈಲ್‌ಗಳನ್ನು ಬೇರೆಯವರು ಕದ್ದು ಓದದಂತೆ ತಡೆ ಹಾಕಬಹುದು.

■ ಎಸ್.ತುಂಬೆ